## ಲೋಕೋಪಯೋಗಿ ರಸ್ತೆಗಳ ಕುರಿತು

1074 (1247) ಶ್ರೀ ಕೆ.ಪ್ರತಾಪಚಂದ್ರ ಶೆಟ್ಟಿ (ಕುಂದಾಪುರ) : ಮಾನ್ಯ ಲೋಕೋಪಯೋಗಿ ಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಜಿಲ್ಲಾ ಪರಿಷತ್ ಆಸ್ತಿತ್ವಕ್ಕೆ ಬಂದ ಮೇಲೆ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಎಷ್ಟು ಕಿ.ಮೀ. ರಸ್ತೆಗಳನ್ನು ಲೋಕೋಪಯೋಗಿ ಇಲಾಖೆ ರಸ್ತೆಗಳಾಗಿ ಮೇಲ್ದರ್ಜೆಗೇರಿಸಲಾಯ್ತು ? (ಕ್ಷೇತ್ರವಾರು ಕಿ.ಮೀ. ರಸ್ತೆ ಸಹಿತ ವಿವರ ನೀಡುವುದು)

ಶ್ರೀ ಆಶ್ವಥ್ ರೆಡ್ಡಿ (ಲೋಕೋಪಯೋಗಿ ಮಂತ್ರಿಯವರು) :

ಅ) 287 ಕಿ.ಮೀ. ಜಿಲ್ಲಾ ಪರಿಷತ್ ರಸ್ತೆಗಳನ್ನು ಮೇಲ್ದರ್ಜೆಗೇರಿಸಿ ಲೋಕೋಪಯೋಗಿ ಇಲಾಖೆ ವಶಕ್ಕೆ ತೆಗೆದುಕೊಳ್ಳಲಾಗಿದೆ. (ವಿವರಗಳು ಈ ಕೆಳಕಂಡತಿದೆ)

| ಕ್ರಮ ಸಂಖ್ಯೆ | ವಿಧಾನ ಸಭಾ ಕ್ಷೇತ್ರದ ಹೆಸರು | ರಸ್ತೆಗಳ ಹೆಸರು | ರಸ್ತೆಯ ಉದ್ದ (ಕಿ.ಮೀ.ಗಳಲ್ಲಿ) | ಏರಿಸಲಾಗಿರುವ ದರ್ಜೆ |
|---|---|---|---|---|
| 1. | ಉಳ್ಳಾಲ | 1. ಕೋಟೆಕಾರ್ ಪಾತೂರು ರಸ್ತೆ | 16.30 | ಮುಖ್ಯ ಜಿಲ್ಲಾ ರಸ್ತೆ |
| | | 2. ನರಿಂಗಾಣಿ ತಾಡುಗೋಳಿ ರಸ್ತೆ | 2.30 | ಮುಖ್ಯ ಜಿಲ್ಲಾ ರಸ್ತೆ |
| 2. | ಪುತ್ತೂರು | 1. ಪಾಣಿಮಂಗಳೂರು ಪಾತೂರು ರಸ್ತೆ | 15.20 | ಮುಖ್ಯ ಜಿಲ್ಲಾ ರಸ್ತೆ |
| | | 2. ವಿಠಲ ಸಾಲೆತ್ತೂರು ರಸ್ತೆ | 10.60 | ಮುಖ್ಯ ಜಿಲ್ಲಾ ರಸ್ತೆ |
| 3. | ಪುತ್ತೂರು | 1. ಹಂಟ್ಯಾರ್ ಬೆಟ್ಟಂಪಾಡಿ ರಸ್ತೆ | 16.80 | ಮುಖ್ಯ ಜಿಲ್ಲಾ ರಸ್ತೆ |
| | | 2. ಸುಬ್ರಹ್ಮಣ್ಯ ಧರ್ಮಸ್ಥಳ ಬೆಳ್ತಂಗಡಿ ಕಾರ್ಕಳ ಉಡುಪಿ ರಸ್ತೆ | 8.00 | ರಾಜ್ಯ ಹೆದ್ದಾರಿ |
| 4. | ಸುಳ್ಯ | 1. ಬೆಳ್ಳಾರೆ ಬೆಂಗಮಲೆ ಪೈಚಾರ್ರಸ್ತೆ | 11.00 | ಮುಖ್ಯ ಜಿಲ್ಲಾ ರಸ್ತೆ |
| | | 2. ಸುಬ್ರಹ್ಮಣ್ಯ ಧರ್ಮಸ್ಥಳ ಬೆಳ್ತಂಗಡಿ ಕಾರ್ಕಳ ಉಡುಪಿ ರಸ್ತೆ | 14.60 | ರಾಜ್ಯಹೆದ್ದಾರಿ |
| 5. | ಉಡುಪಿ | 1. ಸುಬ್ರಹ್ಮಣ್ಯ ಧರ್ಮಸ್ಥಳ ಬೆಳ್ತಂಗಡಿ ಕಾರ್ಕಳ ಉಡುಪಿ ರಸ್ತೆ | 6.70 | ರಾಜ್ಯಹೆದ್ದಾರಿ |
| 6. | ಕಾಪು | 1. ಸುಬ್ರಹ್ಮಣ್ಯ ಧರ್ಮಸ್ಥಳ ಬೆಳ್ತಂಗಡಿ ಕಾರ್ಕಳ ಉಡುಪಿ ರಸ್ತೆ | 8.00 | ರಾಜ್ಯಹೆದ್ದಾರಿ |
| | | 2. ಕಟ್ಟಪಾಡಿ ಶಿರ್ವ ರಸ್ತೆ | 12.00 | ಮುಖ್ಯ ಜಿಲ್ಲಾ ರಸ್ತೆ |
| | | 3. ನಂದಿಕೂರು ಶಿರ್ವ ರಸ್ತೆ | 10.20 | ಮುಖ್ಯ ಜಿಲ್ಲಾ ರಸ್ತೆ |
| 7. | ಬ್ರಹ್ಮಾವರ | 1. ಕೋಟಗೋಳಿಯಂಗಡಿ ರಸ್ತೆ | 10.20 | ಮುಖ್ಯ ಜಿಲ್ಲಾ ರಸ್ತೆ |
| | | 2. ಬ್ರಹ್ಮಾವರ ಜನ್ನಾಡಿ ರಸ್ತೆ | 9.70 | ಮುಖ್ಯ ಜಿಲ್ಲಾ ರಸ್ತೆ |
| | | 3. ಕಲ್ಯಾಣಪುರ ಕುಕ್ಕಿಹಳ್ಳಿ ಪೆರ್ಡೂರು ರಸ್ತೆ | 18.80 | ಮುಖ್ಯ ಜಿಲ್ಲಾ ರಸ್ತೆ |
| 8. | ಕಾರ್ಕಳ | 1. ಸುಬ್ರಹ್ಮಣ್ಯ ಧರ್ಮಸ್ಥಳ ಬೆಳ್ತಂಗಡಿ ಕಾರ್ಕಳ ಉಡುಪಿ ರಸ್ತೆ | 21.00 | ರಾಜ್ಯ ಹೆದ್ದಾರಿ |

| | | | | |
|---|---|---|---|---|
| 9. | ಬೆಳ್ತಂಗಡಿ | 1. ಸುಬ್ರಹ್ಮಣ್ಯ ಧರ್ಮಸ್ಥಳ ಬೆಳ್ತಂಗಡಿ ಕಾರ್ಕಳ ಉಡುಪಿ ರಸ್ತೆ | 25.00 | ರಾಜ್ಯ ಹೆದ್ದಾರಿ |
| | | 2. ಬೆಳ್ತಂಗಡಿ ಕಿಲ್ಲೂರು ರಸ್ತೆ | 16.00 | ಮುಖ್ಯ ಜಿಲ್ಲಾ ರಸ್ತೆ |
| | | 3. ವೇಣೂರು ಅಂದಿಂಜ ನಾರಾವಿ ರಸ್ತೆ | 15.50 | ಮುಖ್ಯ ಜಿಲ್ಲಾ ರಸ್ತೆ |
| 10. | ಕುಂದಾಪುರ | 1. ಬ್ರಹ್ಮಾವರ ಜನ್ನಾಡಿ ರಸ್ತೆ | 9.70 | ಮುಖ್ಯ ಜಿಲ್ಲಾ ರಸ್ತೆ |
| | | 2. ಹಾಲಾಡಿ ಅಮಾಸ್‌ಬೈಲು ರಸ್ತೆ | 13.00 | ಮುಖ್ಯ ಜಿಲ್ಲಾ ರಸ್ತೆ |
| | | 3. ಕೋಟಗೋಳಿಯಂಗಡಿ ರಸ್ತೆ | 16.40 | ಮುಖ್ಯ ಜಿಲ್ಲಾ ರಸ್ತೆ |
| | ಒಟ್ಟು ಜಿಲ್ಲಾ ಮುಖ್ಯ ರಸ್ತೆಯಾಗಿ ಮೇಲ್ದರ್ಜೆಗೇರಿಸಲಾದ ರಸ್ತೆಗಳ ಉದ್ದ | | | 203.70 ಕಿ.ಮೀ. |
| | ಒಟ್ಟು ರಾಜ್ಯ ಹೆದ್ದಾರಿಯಾಗಿ ಮೇಲ್ದರ್ಜೆಗೇರಿಸಲಾದ ರಸ್ತೆಗಳ ಉದ್ದ | | | 83.30 ಕಿ.ಮೀ. |
| | ಒಟ್ಟು | | | **287.00 ಕಿ.ಮೀ.** |

**ಜಿಲ್ಲಾ ಪರಿಷತ್ ಹಾಗೂ ಮಂಡಲ ಪಂಚಾಯತಿಗಳಿಗೆ ನಾಮ ನಿರ್ದೇಶನ ಮಾಡುವ ಬಗ್ಗೆ.**

1075 (1451) ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ (ಕುಂದಾಪುರ) : ಮಾನ್ಯ ಗ್ರಾಮಾಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಮಂಡಲ ಪಂಚಾಯತ್ ಮತ್ತು ಜಿಲ್ಲಾ ಪರಿಷತ್‌ಗಳ ಆಡಳಿತಾಧಿಕಾರಿಯವರಿಗೆ ಸಲಹೆ ಸೂಚನೆ ಕೊಡಲು ಸದಸ್ಯರ ನಾಮ ನಿರ್ದೇಶನ ಮಾಡುವ ಯೋಜನೆ ಸರ್ಕಾರದ ಮುಂದಿದೆಯೇ ;

ಆ) ಹಾಗಿದ್ದಲ್ಲಿ ಯಾವಾಗ ಮಾಡಲಾಗುವುದು ;

ಇ) ಹಾಗಿಲ್ಲದಿದ್ದಲ್ಲಿ ಇವುಗಳಲ್ಲಿ ನಡೆಯುವ ಅವ್ಯವಹಾರವನ್ನು ತಡೆಯಲು ಸರ್ಕಾರ ಯಾವ ಕ್ರಮವನ್ನು ಕೈಗೊಳ್ಳಲಾಗುವುದು ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಗ್ರಾಮಾಣಾಭಿವೃದ್ಧಿ ಮತ್ತು ಪಂ.ರಾಜ್ ಹಾಗೂ ಕಂದಾಯ ಸಚಿವರು) :

ಅ) ಪರಿಶೀಲಿಸಲಾಗುವುದು.

ಆ) ಪರಿಶೀಲಿಸಲಾಗುವುದು.

ಇ) ಜಿಲ್ಲಾ ಪರಿಷತ್ತು ಮತ್ತು ಮಂಡಲ ಪಂಚಾಯಿತಿ ಕಾಯ್ದೆಗನುಗುಣವಾಗಿ ಕ್ರಮ ಕೈಗೊಳ್ಳಲಾಗುವುದು.

**ಮುಳಬಾಗಿಲು ತಾಲ್ಲೂಕಿನ ನಾಚಾಂಕಳ್ಳಿ ಫೀಡರ್ ಚಾನಲ್ ಬಗ್ಗೆ :**

1077 (1662) ಶ್ರೀ ಎಂ. ವಿ. ವೆಂಕಟಪ್ಪ (ಮುಳಬಾಗಿಲು) : ಮಾನ್ಯ ಸಣ್ಣನೀರಾವರಿ ರಾಜ್ಯಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಕೋಲಾರ ಜಿಲ್ಲೆ ಮುಳಬಾಗಿಲು ತಾಲ್ಲೂಕು ದುಗ್ಗ ಸಂದ್ರ ಮತ್ತು ಬೈರಕೂರ್ ಹೋಬಳಿಗಳಲ್ಲಿ ಬರುವ ಅನೇಕ ಹಳ್ಳಿಗಳಿಗೆ ಅನುಕೂಲವಾಗುವಂತೆ ನಾಚಂಕಳ್ಳಿ ಫೀಡರ್ ಚಾನಲ್ ತೆಗೆಯಬೇಕೆಂದು ಅಲ್ಲಿಯ ಜನತೆಯ ಬೇಡಿಕೆ ಇದೆಯೇ ;